ವಿಷಯ : ಕೃಷ್ಣ ಜಲನಯನ ನೀರಾವರಿ ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 144 (726)

ಶ್ರೀ ಬಾಬುಗೌಡ ಪಾಟೀಲ್ (ಕಿತ್ತೂರ್) : ಮಾನ್ಯ ಉಪ ಮುಖ್ಯಮಂತ್ರಿಗಳು, ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೃಷ್ಣಾ ಕಣಿವೆ ನೀರಾವರಿ ಯೋಜನೆಗೆ ಕಳೆದ ವರ್ಷ ನಿಗದಿ ಮಾಡಿದ ಹಣ ಎಷ್ಟು?

ಆ) ಅದರಲ್ಲಿ ಎಷ್ಟು ಹಣ ಖರ್ಚಾಗಿದೆ?

ಇ) ನಿಗದಿಯಾದ ಹಣ ಖರ್ಚಾಗದಿದ್ದಲ್ಲಿ ಕಾರಣಗಳೇನು?

ಶ್ರೀ ಎಸ್.ಎಂ. ಕೃಷ್ಣಾ (ಉಪ ಮುಖ್ಯಮಂತ್ರಿಗಳು) :

ಅ) 519.15 ಕೋಟಿ ರೂ.ಗಳು.

ಆ) 424.44 ಕೋಟಿ ರೂ.ಗಳು.

ಇ) ಕಾರಣಗಳು :

1. 1993-94ನೇ ಸಾಲಿನ ಪ್ರಾರಂಭದಲ್ಲಿ ಸೂಚಿಸಿದಂತ ಕಾರ್ಯಕ್ರಮದ ಅನುಗುಣವಾಗಿ ಹಣ ಭರವಸೆ ಪತ್ರ ಬಿಡುಗಡೆಯಾಗದಿರುವುದು ಮತ್ತು ಸಾಕಷ್ಟು ಹಣ ಭರವಸೆ ಪತ್ರ ಬಿಡುಗಡೆಯಾಗದಿರುವುದು.

2. ಭೂಸ್ವಾದೀನ ಕ್ರಮದಲ್ಲಿನ ತೊಂದರೆ.

3. ಕೃಷ್ಣಾ ಮೇಲ್ದಂಡೆ ಹಾಗೂ ನೀರಾವರಿ ಯೋಜನಾ ಪಲಯದಲ್ಲಿ ತಾಂತ್ರಿಕ ಸಿಬ್ಬಂದಿ ಕೊರತೆ.

ವಿಷಯ : ರಾಜ್ಯದಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವ ರಸ್ತೆಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 146 (81)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಗೆ ಜಿಲ್ಲಾ ಪರಿಷತ್ತು ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ವಿವಿಧ ರಸ್ತೆಗಳು ಎಷ್ಟು ಕಿಮೀ ಇದೆ?

ಆ) ಈ ರಸ್ತೆಗಳಿಗೆ 1991-92, 1992-93, 1993-94ರ ಆಯವ್ಯಯದಲ್ಲಿ ನಿಗಧಿ ಪಡಿಸಿದ ಖರ್ಚಾದ ಹಾಗೂ ಖರ್ಚಾಗದೆ ಉಳಿದ ಹಣವೆಷ್ಟು?